## ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ನಡವಳಿಗಳು

**ವಿಷಯ:** 2023-24ನೇ ಸಾಲಿನ 15ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಮೂಲ (ಅನಿರ್ಬಂಧಿತ) ಅನುದಾನವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 300 ಜಿಪಸ 2022, ದಿನಾಂಕ:01.07.2022.
2. ಭಾರತ ಸರ್ಕಾರದ ವಿತ್ತ ಮಂತ್ರಾಲಯ, ವೆಚ್ಚ ಇಲಾಖೆ, ಆರ್ಥಿಕ ಆಯೋಗ ವಿಭಾಗದ ಪತ್ರ ಸಂ.ಎಫ್.15(4)ಎಫ್‌ಸಿ-XV/ಎಫ್‌ಸಿಡಿ/2020-25, ದಿನಾಂಕ:06.09.2023.
3. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ:FD 13 BGL 2023, ದಿನಾಂಕ:07.09.2023.
4. ಆರ್ಥಿಕ ಇಲಾಖೆಯ ಆ.ಆ.ಕೋ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 28 ಆಆಕೋ 2021, ದಿನಾಂಕ:07.09.2023.

**ಪ್ರಸ್ತಾವನೆ:**

15ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2023-24ನೇ ಸಾಲಿಗೆ ಒಟ್ಟು ರೂ.249000.00ಲಕ್ಷಗಳ ಅನುದಾನವನ್ನು ಭಾರತ ಸರ್ಕಾರವು ನಿಗಧಿಪಡಿಸಿದ್ದು, ಶೇ.85ರಷ್ಟು ರೂ.211650.00ಲಕ್ಷಗಳನ್ನು ಗ್ರಾಮ ಪಂಚಾಯತಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಮೇಲೆ ಓದಲಾದ (2)ರ ಭಾರತ ಸರ್ಕಾರದ ಪತ್ರದನ್ವಯ 15ನೇ ಹಣಕಾಸು ಆಯೋಗದ 2023-24ನೇ ಸಾಲಿನ ಮೂಲ (ಅನಿರ್ಬಂಧಿತ) ಅನುದಾನದ ಮೊದಲನೇ ಕಂತು ರೂ.42330.00ಲಕ್ಷಗಳ ಅನುದಾನವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಿರುತ್ತದೆ.

ಮೇಲೆ ಓದಲಾದ(3)ರ ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಹಾಗೂ ಮೇಲೆ ಓದಲಾದ (4)ರ ಅನಧಿಕೃತ ಟಿಪ್ಪಣಿಯನ್ವಯ 2023-24ನೇ ಸಾಲಿನ ಮೂಲ (ಅನಿರ್ಬಂಧಿತ) ಅನುದಾನದ ಮೊದಲನೇ ಕಂತು ರೂ.42330.00 (ನಲವತ್ತೆರಡು ಸಾವಿರದ ಮೂರು ನೂರ ಮೂವತ್ತು ಲಕ್ಷ ರೂಪಾಯಿಗಳು ಮಾತ್ರ)ಲಕ್ಷಗಳನ್ನು ರಾಜ್ಯದ ಬೊಕ್ಕಸಕ್ಕೆ ಜಮೆಯಾಗಿರುವ ಕುರಿತು ದೃಢೀಕರಣವನ್ನು ನೀಡಿರುತ್ತದೆ.

ಅದರಂತೆ, 2023-24ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯದಲ್ಲಿ ಗ್ರಾಮ ಪಂಚಾಯತಿಗಳಿಗೆ ಲೆಕ್ಕ ಶೀರ್ಷಿಕೆ:2515-00-198-6-13ರಡಿ ಒದಗಿಸಲಾಗಿರುವ ರೂ.211650.00ಲಕ್ಷಗಳಲ್ಲಿ 15ನೇ ಹಣಕಾಸು ಆಯೋಗದ ಮೂಲ (ಅನಿರ್ಬಂಧಿತ) ಅನುದಾನದ ಮೊದಲನೇ ಕಂತು ರೂ.42330.00 (ನಲವತ್ತೆರಡು ಸಾವಿರದ ಮೂರು ನೂರ ಮೂವತ್ತು ಲಕ್ಷ ರೂಪಾಯಿಗಳು ಮಾತ್ರ)ಲಕ್ಷಗಳನ್ನು ಅನುಬಂಧ ಹಾಗೂ ಮೇಲೆ ಓದಲಾದ (1)ರ ಮಾರ್ಗಸೂಚಿಯನ್ವಯ 5951 ಗ್ರಾಮ ಪಂಚಾಯತಿಗಳಿಗೆ ಖಜಾನೆ-2ನ BMS ಮೂಲಕ ಸಂಬಂಧಿಸಿದ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲು ನಿರ್ಧರಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**<u>ಆಯುಕ್ತಾಲಯದ ಆದೇಶ ಸಂಖ್ಯೆ:KPRC-DEV/238/2023, ದಿನಾಂಕ:14.09.2023.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2023-24ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯದಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಲೆಕ್ಕ ಶೀರ್ಷಿಕೆ:2515-00-198-6-13ರಡಿ ಒದಗಿಸಲಾಗಿರುವ ರೂ. 211650.00ಲಕ್ಷಗಳಲ್ಲಿ 15ನೇ ಹಣಕಾಸು ಆಯೋಗದ ಮೂಲ

(ಅನಿರ್ಬಂಧಿತ) ಅನುದಾನದ ಮೊದಲನೇ ಕಂತು ರೂ.42330.00 (ನಲವತ್ತೆರಡು ಸಾವಿರದ ಮೂರು ನೂರ ಮೂವತ್ತು ಲಕ್ಷ ರೂಪಾಯಿಗಳು ಮಾತ್ರ)ಲಕ್ಷಗಳನ್ನು ಈ ಆದೇಶಕ್ಕೆ ಲಗತ್ತಿಸಲಾದ ಅನುಬಂಧದನ್ವಯ 5951 ಗ್ರಾಮ ಪಂಚಾಯತಿಗಳಿಗೆ ಖಜಾನೆ-2ನ BMS ಮೂಲಕ ಸಂಬಂಧಿಸಿದ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2023, ದಿನಾಂಕ:31-07-2023ರಲ್ಲಿ ಸಂಬಂಧಿಸಿದ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿರವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಕೆಪಿಆರ್‌ಸಿ/ಡಿಇವಿ/423/2022, ದಿನಾಂಕ:12.06.2023 ರನ್ವಯ ಹೊರಡಿಸಲಾಗಿದೆ.

**(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್) ರವರಿಂದ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ)**

ನಿರ್ದೇಶಕರು(ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ (ಪಿ.ಬಿ.ನಂ.5329) ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ,ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
5. ವಿಶೇಷಾಧಿಕಾರಿ (ಜಿ.ಪಂ), ವೆಚ್ಚ-6, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ವಿಶೇಷಾಧಿಕಾರಿ, ವಿತ್ತೀಯ ಸುಧಾರಣೆ ಮತ್ತು ಗಣಕಕೋಶ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆ.ಆ.ಕೋ&ವಿಶ್ರಾಂತಿ ವೇತನ), ವಿಧಾನಸೌಧ, ಬೆಂಗಳೂರು.
9. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
10. ಆರ್ಥಿಕ ಅಧಿಕಾರಿ, ಲೆಕ್ಕ ಪತ್ರ ಶಾಖೆ, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಅಗತ್ಯ ಕ್ರಮಕ್ಕಾಗಿ.
11. ಮುಖ್ಯ ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ, ಕರ್ನಾಟಕ ವಿಕಾಸ – ಪತ್ರಿಕೆಯಲ್ಲಿ ಪ್ರಕಟಿಸಲು.
12. ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
13. ಶಾಖಾ ರಕ್ಷಾ ಕಡತ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಹಿರಿಯ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
4. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ರವರ ಆಪ್ತ ಸಹಾಯಕರು.
5. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ &ಆರ್) ರವರ ಆಪ್ತ ಕಾರ್ಯದರ್ಶಿಗಳು.
6. ಸರ್ಕಾರದ ಜಂಟಿ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.